ಎರಡನೇ ವರದಿಯಲ್ಲಿ ಶಿಫಾರಸ್ಸುಗಳ ಸಂಬಂಧದಲ್ಲಿ ಸರ್ಕಾರವು ತೆಗೆದುಕೊಂಡ ಕ್ರಮದ ಬಗ್ಗೆ ಐದನೇ ವರದಿಯನ್ನು ನಾನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವರದಿಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ವಿತ್ತೀಯ ಕಾರ್ಯಕಲಾಪಗಳು

1987–88ನೇ ಸಾಲಿನ ಪೂರಕ ಅಂದಾಜುಗಳ ಮಂಡನೆ

ಶ್ರೀ ಎ. ಲಕ್ಷ್ಮೀಸಾಗರ್(ಮಾನ್ಯ ಕಾನೂನು ಸಚಿವರು). —ಮಾನ್ಯ ಮುಖ್ಯ ಮಂತ್ರಿಗಳ ಹೆಸರಿನ ಮುಂದೆ ಇರತಕ್ಕ ಭಾರತ ಸಂವಿಧಾನದ ೨೦೪ (೧) ನೇ ಅನುಚ್ಛೇದದ ಮೇರೆಗೆ ೧೯೮೭–೮೮ ನೇ ಸಾಲಿನ ಆರ್ಥಿಕ ವರ್ಷದ ಪೂರಕ ಅಂದಾಜುಗಳನ್ನು (ಮೊದಲನೇ ಕಂತು) ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ಪೂರಕ ಅಂದಾಜುಗಳನ್ನು (ಮೊದಲನೇ ಕಂತು) ಸಭೆಗೆ ಒಪ್ಪಿಸಲಾಯಿತು.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯ ಮಂತ್ರಿಗಳ ಹೆಸರಿನ ಮುಂದೆ ಇರತಕ್ಕ ಪೂರಕ ಅಂದಾಜುಗಳನ್ನು ಮಾನ್ಯ ಕಾನೂನು ಸಚಿವರು ಸಭೆಯ ಮುಂದೆ ಮಂಡಿಸಿದರು. ಆದರೆ ನಾವು ಈ ಬಗ್ಗೆ ಚರ್ಚೆ ಮಾಡಬೇಡವೇ ?

ಅಧ್ಯಕ್ಷರು. —ಈಗ ಒಂದು ಪ್ರಕಟಣೆ ಇದೆ. ಆ ಪ್ರಕಟಣೆಯನ್ನು ಓದುತ್ತೇನೆ. ಆಮೇಲೆ ನೋಡೋಣ.

ಪ್ರಕಟಣೆ

ಅಧ್ಯಕ್ಷರು.—ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿದೆ.

" ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಮತ್ತು ನಡವಳಿಕೆಯ ನಿಯಮಗಳ ೧೮ ರ ಮೇರೆಗೆ ವಿಧಾನ ಪರಿಷತ್ತಿನಲ್ಲಿ ಈ ದಿವಸ ಅಂಗೀಕಾರವಾದ ಈ ಕೆಳಕಂಡ ವಿಧೇಯಕಗಳನ್ನು ವಿಧಾನ ಸಭೆಯ ಅನುಮೋದನೆಗಾಗಿ ಕಳುಹಿಸುತ್ತಿದ್ದೇನೆ.

೧. ೧೯೮೭ನೇ ಇಸವಿಯ ಪತ್ತಿ ಸಾಗಾಣಿಕೆ (ಕರ್ನಾಟಕ ತಿದ್ದುಪಡಿ) ವಿಧೇಯಕ.

೨. ೧೯೮೭ನೇ ಇಸವಿಯ ಕರ್ನಾಟಕ ವಿಶ್ವವಿದ್ಯಾನಿಲಯ ಶಿಕ್ಷಕರ (ಹಂಗಾಮಿ ಉಪನ್ಯಾಸಕರ ವಿಲೀನೀಕರಣ) ವಿಧೇಯಕ.

೩. ೧೯೮೭ನೇ ಇಸವಿಯ ಕರ್ನಾಟಕ ವೃಕ್ಷ ಸಂರಕ್ಷಣೆ (ತಿದ್ದುಪಡಿ) ವಿಧೇಯಕ.

ಶ್ರೀ ಯು. ಭೂಪತಿ —ಮಾನ್ಯ ಅಧ್ಯಕ್ಷರೇ, ನಾನು ಒಂದು ಅಡ್ಜರ್ನಮೆಂಟ್ ಮೋಷನ್ ಕಳುಹಿಸಿದ್ದೆ. ಅದೂ ಅಲ್ಲದೆ ನಾನು ಹೋದ ವಾರ ಕೇಳಿದ ಪ್ರಶ್ನೆಗೆ ಇನ್ನೂ ಉತ್ತರ ಬಂದಿಲ್ಲ.

MR. SPEAKER.—I have to try my level best.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಯು ಹ್ಯಾವ್ ಟ್ರೈಡ್ ಯುವರ್ ಲೆವೆಲ್ ಬೆಸ್ಟ್. ಎಂದು ಹೇಳಿದಿರಿ. ಉತ್ತರ ತರಿಸಿಕೊಡಬೇಕೆಂದು ನೀವು ಇಷ್ಟು ಹೇಳಿದರೂ ಕೂಡ, ಉತ್ತರ ಬರದೇ ಹೋದರೆ ಅದರ ಅರ್ಥ ಏನು ? ಅನೇಕ ಉತ್ತರಗಳು ಬರಲೇ ಇಲ್ಲ. ಮಂತ್ರಿಗಳು ಬರುವಾಗ ಉತ್ತರಗಳನ್ನು ಜೊತೆಯಲ್ಲಿ ತೆಗೆದುಕೊಂಡು ಬರಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕಾಗಿ ಅಡ್ಜರ್ನಮೆಂಟ್ ಮೋಷನ್ ಮಾನ್ಯ ಅಧ್ಯಕ್ಷರೇ, ಉತ್ತರ ಬರದಿದ್ದರೆ ಅದನ್ನು ತರಿಸಿಕೊಡುತ್ತೇವೆ. ಉತ್ತರವನ್ನು ತರಿಸಿ ಕೊಡುವುದು ನಮ್ಮ ಕರ್ತವ್ಯ. ಆದರೆ, ಇವತ್ತಿನವರೆಗೂ ಪ್ರಶ್ನೋತ್ತರ ಸಮಯ ಹನ್ನೆರಡು ಕಾಲು ಆದರೂ ಮುಗಿಯುವುದಿಲ್ಲ. ಉತ್ತರಗಳು ಬರದಿದ್ದರೆ, ಇಷ್ಟು ಸಮಯ ತೆಗೆದುಕೊಳ್ಳುವುದಕ್ಕೆ ಆಗುತ್ತಿತ್ತೇ ? ಉತ್ತರ ಬರದೇ ಕಾರ್ಯಕಲಾಪ ನಿಂತಿದೆಯೆಂದು ಯಾರು ಹೇಳಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ,—ತಾವು ತಪ್ಪಿಸಿಕೊಳ್ಳುವುದಕ್ಕೆ ಇದನ್ನು ಹೇಳುತ್ತಿದ್ದೀರಿ.

(ಕೆಲವು ಮಾನ್ಯ ಸದಸ್ಯರುಗಳು ಎದ್ದು ನಿಂತು ಮಾತನಾಡತೊಡಗಿದರು)

ಅಧ್ಯಕ್ಷರು.—ನೀವು ಮೂರು ಜನವೂ ಎದ್ದು ನಿಂತು ಮಾತನಾಡಿದರೆ ನಾನು ಯಾರನ್ನು ಕೇಳುವುದು ?

ಶ್ರೀ ಎಂ. ಎಸ್. ಕೃಷ್ಣನ್.—ಈ ಮನೆಯಲ್ಲಿ ಮಾತನಾಡುವುದಕ್ಕೆ ಪ್ರಶ್ನೆಗಳಿಗೆ ಉತ್ತರ ಬಂದಿದ್ದರೆ ಮಾತ್ರ ಎಂದು ತಿಳಿದುಕೊಳ್ಳಬಾರದು ಮಾತನಾಡುವುದಕ್ಕೆ ಅಭಾವ ಇಲ್ಲ. ಉತ್ತರಗಳನ್ನು ಸರಿಯಾಗಿ ತರಿಸಿಕೊಡಿ. ಉತ್ತರಗಳನ್ನು ತರಿಸಿಕೊಡುವ ಜವಾಬ್ದಾರಿ ಮಂತ್ರಿಗಳಿಗೆ ಇರುತ್ತದೆ. ಇಂಥ ಉತ್ತರವನ್ನು ತರಿಸಿಕೊಡಿ ಎಂದು ಮಾನ್ಯ ಅಧ್ಯಕ್ಷರು ಬರೆದರೂ ಉತ್ತರ ಬರದಿದ್ದರೆ ಅವರು ತಾನೇ ಏನು ಮಾಡುತ್ತಾರೆ? ತಾವು ಸ್ವಲ್ಪ ಇದನ್ನು ಸರಿ ಮಾಡಬೇಕು (ಮಾನ್ಯ ಮುಖ್ಯ ಮಂತ್ರಿಯವರನ್ನು ಉದ್ದೇಶಿಸಿ)

ಶ್ರೀ ಜೆ.ಹೆಚ್ ಪಟೇಲ್.—ಪರಿಶೀಲನೆಯಲ್ಲಿ ಇದೆ ಎಂದ ತಕ್ಷಣ ಆದು ಉತ್ತರ ಎಂದು ತಿಳಿದುಕೊಳ್ಳಬೇಕು. ಹೌಸ್ ಆಫ್ ಕಾಮನ್ಸ್‌ನಲ್ಲಿ ಮಂತ್ರಿಗಳು ಇಟ್ ಈಸ್ ಅಂಡರ್ ಕನ್ಸಿಡರೇಷನ್ ಎಂದು ಮಾತ್ರ ಹೇಳುತ್ತಾರೆ.

ಶ್ರೀ ಎಂ.ಎಸ್. ಕೃಷ್ಣನ್.—ಉತ್ತರವೇ ಬಂದಿಲ್ಲವಲ್ಲ, ಆಗ ಏನು ಮಾಡುವುದು ?

ಶ್ರೀ ಯು. ಭೂಪತಿ.—ಕಳೆದ ವಾರ ನಾನು ಕೇಳಿದ ಪ್ರಶ್ನೆಗೆ ಇನ್ನೂ ಉತ್ತರವೇ ಬಂದಿಲ್ಲ.

ಅಧ್ಯಕ್ಷರು.—ಹೀ ಜನ ಸಾಲಾಗಿ ಎದ್ದು ನಿಂತರೆ ಏನು ಮಾಡುವುದು ?

ಶ್ರೀ ಜೆ.ಹೆಚ್. ಪಟೇಲ್.—ಅಂಡರ್ ಕನ್ಸಿಡರೇಷನ್ ಎಂದು ಮಿನಿಸ್ಟರ್ಸ್ ಹೇಳುತ್ತಾರೆ. ಇನ್ನೂ ಕೇಳಿದರೆ, ಅಂಡರ್ ಆಕ್ಟಿವ್ ಕನ್ಸಿಡರೇಷನ್ ಎಂದು ಹೇಳುತ್ತಾರೆ. Under Consideration means there is no file available ಎಂದು ಅರ್ಥ. Under active Consideration means the Government will take some time to answer ಎಂದು ಅರ್ಥ ಪರಿಶೀಲನೆಯಲ್ಲಿ ಇದೆ ಎಂದು ಆದರ ಅರ್ಥ. ಪರಿಶೀಲನೆಯಲ್ಲಿ ಇದೆ ಎಂದರೆ ಏನು ಎಂದು ಕೇಳಿದರೆ ಆದಕ್ಕೆ ಉತ್ತರ ಹೇಳುವುದಕ್ಕಾಗುವುದಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಜೆ.ಹೆಚ್. ಪಟೇಲರು ಬಹಳ ಬುದ್ಧಿವಂತರು. ಇಲ್ಲಿ ಇರುವವರೆಲ್ಲಾ ಪರಿಶೀಲನಾ ಮಂತ್ರಿಗಳು ಇದ್ದಾರೆ. ಎಲ್ಲದಕ್ಕೂ ಪರಿಶೀಲನೆ ಮಾಡುತ್ತೇವೆ ಎಂದು ಹೇಳುತ್ತಾರೆ. ಇದರಲ್ಲೆ ಆಕ್ಟೀವ್ ಇಲ್ಲ ಏನೂ ಇಲ್ಲ. ಮಾನ್ಯ ಅಧ್ಯಕ್ಷರೇ, ತಾವು ಎಷ್ಟು ಕ್ವೊಶ್ಚನ್‌ಗಳನ್ನು ಪಾರ್ಟ್ ನೋಟೀಸ್ ಕ್ವೊಶ್ಚನ್‌ಗೆ ಕನ್‌ವರ್ಟ್ ಮಾಡಿಲ್ಲ ? ಉತ್ತರ ಸರಿಯಾಗಿ ಹೇಳಿದ್ದರೆ ಪಾರ್ಟ್ ನೋಟೀಸ್ ಕ್ವೊಶ್ಚನ್‌ಗೆ ಏಕೆ ಕನ್‌ವರ್ಟ್ ಮಾಡಬೇಕಾಗುತ್ತದೆ ? ಚೋಟಾ ಪ್ರಶ್ನೆಗೂ ಒಂದು ಸರಿಯಾದ ಉತ್ತರ ಹೇಳುವುದಿಲ್ಲ.
ತಮ್ಮಲ್ಲಿಯೂ ಇದೆ. ನಮ್ಮಲ್ಲಿಯೂ ಇದೆ. ಅಂಡರೂ ಇಲ್ಲ, ಆಕ್ಟೀವ್ ಇಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಕೆಲವು ಪ್ರಶ್ನೆಗಳಿಗೆ ಉತ್ತರಗಳನ್ನು ತರಿಸುವುದಕ್ಕೆ ಸ್ವಲ್ಪ ಸಮಯ ಹಿಡಿಯುತ್ತದೆ. ಬ್ರಿಟಿಷ್ ಪಾರ್ಲಿಮೆಂಟ್‌ನಲ್ಲಿ ಇಂತಹ ಪ್ರಶ್ನೆಗಳಿಗೆ ಉತ್ತರಗಳನ್ನು ತರಿಸುವುದು ವಿಳಂಬವಾದರೆ, ಸಂಬಂಧಪಟ್ಟ ಮಂತ್ರಿಗಳು ಏನು ಹೇಳುತ್ತಾರೆ ಅಂದರೆ, ಈ ಪ್ರಶ್ನೆಗೆ ವಿವರವಾದ ಉತ್ತರವನ್ನು ತರಿಸಲಿಕ್ಕೆ ದೀರ್ಘಕಾಲ ಹಿಡಿಯುತ್ತದೆ ಎಂದು ಇದೇ ಉತ್ತರ ಅಲ್ಲಿ ಹೇಳುವುದು. ಆದರೆ ಇಲ್ಲಿ ಮಾತ್ರ ಇಲ್ಲ ನೋಟೀಸ್ ಅಂದರೆ, ಓರಲ್‌ನಲ್ಲಿ ಸಂಪ್ಲಿಮೆಂಟರಿ ಮಾತ್ರ...

ಶ್ರೀ ಕೆ. ಎಚ್. ಪಾಟೀಲ್.—ಅಧ್ಯಕ್ಷರೇ...

ಶ್ರೀ ಯು. ಭೂಪತಿ.—ಈ ಪ್ರಶ್ನೆಗಳಿಗೆ ಉತ್ತರ ತರಿಸಂವುದಕ್ಕೆ ಒಂದು ಘಂಟೆಯು ಸಮಯು ಸಾಕು.

ಅಧ್ಯಕ್ಷರು.—ಮಾನ್ಯ ಭೂಪತಿಯವರು ಕಂಳಿತುಕೊಳ್ಳಬೇಕು.

ಶ್ರೀ ಕೆ. ಎಚ್. ಪಾಟೀಲ್.—ಅಧ್ಯಕ್ಷರೇ, ಇಂಗ್ಲೆಂಡ್ ಪಾರ್ಲಿಮೆಂಟ್‌ಗೂ, ಇಂಡಿಯನ್ ಪಾರ್ಲಿಮೆಂಟ್‌ಗೂ ವ್ಯತ್ಯಾಸ ಇದೆ. ಕಾನ್‌ಸೆನ್ಸ್ ನೋಡಿಕೊಂಡು ತಮ್ಮ ಹೃದಯದ ಎಕ್ಸ್‌ರೇ

ಮಾಡಿ ಉತ್ತರದಲ್ಲಿ ಹೇಳುತ್ತಾರೆ. ಆದರೆ ಇಲ್ಲಿ ಹಾಗೆ ಹೇಳುವುದಿಲ್ಲ. ಇಲ್ಲಿ ಉತ್ತರ ಕೊಡುವ ಸಾಧ್ಯತೆ ಇದ್ದರೂ ಕೂಡ ಹೇಳುವುದಿಲ್ಲ. ನಿಮ್ಮ ಮಂತ್ರಿಮಂಡಲದಲ್ಲಿ ಎಷ್ಟು ಜನ ಮಂತ್ರಿಗಳು ಇದ್ದಾರೆ ಎಂದು ಕೇಳಿದರೆ, ಅದಕ್ಕೆ ಬೇರೆ ರೀತಿಯ ಉತ್ತರ ಬರುತ್ತದೆ...

ಶ್ರೀ ರಾಮಕೃಷ್ಣ ಹೆಗಡೆ.—ನನ್ನ ಹೃದಯ ಅವರ ಎದೆಯಲ್ಲಿ ಇದ್ದರೆ ನಾನು ಏನು ಮಾಡಲಿ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಮುಖ್ಯಮಂತ್ರಿಗಳವರು ಬ್ರಿಟಿಷ್ ಪಾರ್ಲಿಮೆಂಟ್‌ನಲ್ಲಿ ನಡೆಯುವುದನ್ನು ಹೇಳಿದರು. ಅಲ್ಲಿ ಪಾರ್ಲಿಮೆಂಟ್ ಸಭೆ ಎಷ್ಟು ದಿವಸ ಕಾಲ ನಡೆಯುತ್ತದೆ ? ನಮ್ಮಲ್ಲಿ ಇವಾಗ ಏಳು ದಿವಸಗಳ ಕಾಲ ನಡೆಸುತ್ತೀರಿ. ಚೌಕಾಸಿ ಮಾಡಿ ಮುಗಿಸಿ ಬಿಡುತ್ತೀರಿ. ಮಂತ್ರಿ ಮಂಡಿನ ವರ್ಷವೇ ನಾವು ಇಲ್ಲಿ ಸೇರುವುದು. ನಮ್ಮ ಪ್ರಶ್ನೆಗಳಿಗೆ ಉತ್ತರ ಎಲ್ಲಿ ಸಿಗುವುದು ? ಅಲ್ಲಿಯೂ ಹೀಗೆಯೇ ನಡೆಯುತ್ತದೆಯೇ ?

ಶ್ರೀ ಕೆ. ಹೆಚ್. ಪಾಟೀಲ್.—ನಾವು, ನೀವು ಮಂತ್ರಿಗಳು ಇದ್ದಾಗ್ಯೂ ಸಹಿತ ಏನಾಗಿದೆ ? ಮೂರು ದಿವಸಗಳಲ್ಲಿ ಉತ್ತರಗಳನ್ನು ಕಳುಹಿಸಿದ್ದಿದ್ದಲ್ಲಿ, ಸಸ್ಪೆಂಡ್ ಮಾಡುತ್ತಾ ಇದ್ದೆವು. ಡಿಸ್‌ಮಿಸ್ ಮಾಡುತ್ತಾ ಇದ್ದೆವು. ಈಗ ನಿಮಗೆ ಅದನ್ನು ಮಾಡುವ ಶಕ್ತಿ ಇಲ್ಲವೇ ? ನೀವು ಉತ್ತಮವಾದಂತಹ ಸಂಪ್ರದಾಯವನ್ನು ಹಾಕಿ. ಮಾನ್ಯ ರಾಮಕೃಷ್ಣ ಹೆಗಡೆಯವರು ಉತ್ತಮವಾದಂತಹ ಕೆಲಸಗಳನ್ನು ಮಾಡಲಿ. ನಮ್ಮ ಮಾನ್ಯ ಜೆ. ಎಚ್. ಪಟೇಲ್‌ರವರು ಏನೊ ಜೋಕ್ ಮಾಡುವುದಕ್ಕೆ ಹೇಳುತ್ತಾರೆ. ಅವರು ಹೇಳಿದಹಾಗೆ ಮಾಡಿದರೆ ನಮ್ಮ ಆಫೀಸರ್ಸ್ ಇನ್ನು ಮಂದಿ ಸ್ಲೀಪಿಂಗ್ ಡೋಸ್ ತೆಗೆದುಕೊಳ್ಳುತ್ತಾರೆ.

ಶ್ರೀ ಯು. ಭೂಪತಿ.—ಅಧ್ಯಕ್ಷರೇ, ನಾನು ಒಂದು ನಿಲುವಳಿ ಸೂಚನೆ ಕಳುಹಿಸಿದ್ದೆ. ಗುಂತ್ತಿಗೆ ಆಧಾರದ ಮೇಲೆ ಕೆಲಸ ಮಾಡತಕ್ಕಂಥ ಶಿಕ್ಷಕರ ವಿಚಾರದಲ್ಲಿ...

ಅಧ್ಯಕ್ಷರು —ತಾವು ದಯವಿಟ್ಟು ಕುಳಿತುಕೊಳ್ಳಿ. ನಿಮ್ಮದು ನಾಳೆ ನಿಯಮ ೬೮ರ ಪ್ರಕಾರ ಚರ್ಚೆ ಮಾಡೋಣ.

ಶ್ರೀ ರಮೇಶ್ ಕುಮಾರ್.—ಅಧ್ಯಕ್ಷರೇ, ಈ ಸದನದ ಒಬ್ಬ ಗೌರವಾನ್ವಿತ ಸದಸ್ಯರು...

ಅಧ್ಯಕ್ಷರು.— ಮಾನ್ಯ ರಮೇಶ್ ಕುಮಾರ್‌ರವರೇ, ನೀವು ರೂಲ್ಸ್ ಪ್ರಕಾರ ಹೋಗ ಬೇಕು.

ಶ್ರೀ ರಮೇಶ್ ಕುಮಾರ್.—ಅಧ್ಯಕ್ಷರೇ, ನನಗೆ ಅವಕಾಶವನ್ನು ಕೊಡಿ. ನೋಟೀಸ್ ಕೊಡುವುದಕ್ಕೆ ನನಗೆ ಅವಕಾಶ ಇಲ್ಲದ ಹಾಗೆ ಆಗಿದೆ. ಅಂತಹ ಸ್ಥಿತಿ ಬಂದಿತ್ತು. ಈ ಸದನದ ಒಬ್ಬ ಗೌರವಾನ್ವಿತ ಸದಸ್ಯರು ಬೆಂಗಳೂರಿನ ದೂರದರ್ಶನದ ವರದಿಗಾರರೊಬ್ಬರಿಗೆ ತಮ್ಮ ಮೆಚ್ಚುಗೆಯನ್ನು ಸೂಚಿಸಿ, ಇಲ್ಲಿಯ ಕಾರ್ಯಕಲಾಪಗಳನ್ನು ವರದಿಮಾಡಿದ್ದುದಕ್ಕೆ ಹಣವನ್ನು ಕೊಡಲು ಪ್ರಯತ್ನ ಪಟ್ಟಿದ್ದಾರೆ ಎಂದು...

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ. ತಾವುಗಳು ಒಬ್ಬ ಎಕ್ಸ್‌ಪಿರಿಯನ್ಸ್‌ಡ್ ಮೆಂಬರ್ ಇದ್ದೀರಿ. ಈಗ ಮಾನ್ಯ ಉಮರಬ್ಬರವರು ವಾತನಾಡಿ.

ಹಕ್ಕಿ ಚ್ಯುತಿಯ ಪ್ರಸ್ತಾಪ

ಕನ್ನಡ ಕಾವಲು ಸಮಿತಿಯ ಅಧ್ಯಕ್ಷರವರು ಬರೆದ ಪತ್ರದ ಬಗ್ಗೆ.

ಶ್ರೀ ಬಿ. ಎಂ. ಉಮರಬ್ಬ.— ಮಾನ್ಯ ಅಧ್ಯಕ್ಷರೇ, ಒಂದು ಗಂಭೀರವಾದಂತಹ ಹಾಗೂ ಈ ಸದನದ ಸರ್ವ ಸದಸ್ಯರು ಪಕ್ಷ ಭೇದವಿಲ್ಲದೇ, ಸದಸ್ಯರ ಹಕ್ಕಿಗೆ, ಗೌರವಕ್ಕೆ ಸಂಬಂಧಪಟ್ಟಂತಹ ಒಂದು ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಲು ಬಯಸುತ್ತೇನೆ. ನಮ್ಮ ಕರ್ನಾಟಕ ರಾಜ್ಯದ ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿಯ ಅಧ್ಯಕ್ಷರು ಅನೇಕ ಬಾರಿ ಅನೇಕ ಪತ್ರಗಳನ್ನು ಶಾಸಕರಿಗೆ ಬರೆಯು